**ಇಂದು ದಿಃ07-01-2025 ರಂದು ಸಾಕ್ಷಿಯನ್ನು ಪುನಃ ಮಧ್ಯಂತರ ಆದೇಶದ ಮೇರೆಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ **:** ಶ್ರೀ ಬಿ.ಹೆಚ್**.** ವಕೀಲರಿಂದ ವಾದಿ ಪರಃ

ನಾನು ಸರ್ವೆ ನಂಬರ್-53/ಪಿ1/ಪಿ2 ಇದರ 2003-04 ರ ಪಹಣಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-84 ಎಂದು, ಸರ್ವೆ ನಂಬರ್-53 ಇದರ 2009-10 ರ ಪಹಣಿಯನ್ನು ನಿ.ಡಿ-85 ಎಂದು, ಸರ್ವೆ ನಂಬರ್-32/5 ಇದರ 2024-25 ರ ಪಹಣಿಯನ್ನು ನಿ.ಡಿ-86 ಎಂದು, ಸರ್ವೆ ನಂಬರ್-40/4 ಎ, ಸರ್ವೆ ನಂಬರ್-32/4, ಸರ್ವೆ ನಂಬರ್-40/3 ಎ ಇವುಗಳ ಚಾಲ್ತಿ ಪಹಣಿಗಳನ್ನು ಕ್ರಮವಾಗಿ ನಿ.ಡಿ-87 ರಿಂದ 89 ಎಂದು ಗುರುತಿಸಲಾಯಿತು.

MR No.62/2010-11 ಇದರ ನಿಜಪ್ರತಿಯನ್ನು ನಿ.ಡಿ-90 ಎಂದು, ಸರ್ವೆ ನಂಬರ್-53/ಪಿ1/ಪಿ-2 ಇದರ 2002-03 ರ, 2003-04, 2004-05, 2005-06, 2006-07, 2007-08, 2008 ರ ಪಹಣಿಗಳನ್ನು ಕ್ರಮವಾಗಿ ನಿ.ಡಿ-91 ರಿಂದ 97 ಎಂದು, ಸರ್ವೆ ನಂಬರ್-53/4 ಇದರ 2010-11, 2011-12, 2012-13, 2013-14, 2014-15 ಇವುಗಳ ಪಹಣಿಗಳನ್ನು ಕ್ರಮವಾಗಿ ನಿ.ಡಿ-98 ರಿಂದ 102 ಎಂದು ಗುರುತಿಸಲಾಯಿತು.

ಸರ್ವೆ ನಂಬರ್-53/3 ಇದರ 2010-11, 2011-12, 2012-13, 2013-14, 2014-15, 2024-25 ಇವುಗಳ ಪಹಣಿಗಳನ್ನು ಕ್ರಮವಾಗಿ ನಿ.ಡಿ-103 ರಿಂದ 108 ಎಂದು, MR No.21/2005-04, MR No.62/2010-11, MR No.H-30/2020-21 ಇವುಗಳ ನಿಜಪ್ರತಿಗಳನ್ನು ಕ್ರಮವಾಗಿ ನಿ.ಡಿ-109 ರಿಂದ 111 ಎಂದು ಗುರುತಿಸಲಾಯಿತು.

ನಾನು ಮಹದೇವಪ್ಪ, ನನ್ನ ಹೆಂಡತಿಯ ತಂದೆಯ ಮರಣ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಸರ್ವೆ ನಂಬರ್-32/5,

40/4 ಎ, 32/4 ಮತ್ತು 40/3 ಎ ಇವು ಮಹದೇವಪ್ಪ ಇವನಿಂದ ಅವನ ಮಕ್ಕಳಾದ ಮಂಜಪ್ಪ ಮತ್ತು ಶಿವಪ್ಪ ಅಂದರೆ ನನ್ನ ಹೆಂಡತಿಯ ಸಹೋದರರಿಗೆ ವಾರಸನಾತದಿಂದ ಬಂದಿರುತ್ತದೆ. ಈ ಜಮೀನುಗಳು ನೀರಾವರಿ ಜಮೀನುಗಳು ಇರುತ್ತವೆ.

ಮುಂದುವರೆದ ಪಾಟೀ ಸವಾಲು ಶ್ರೀ ಬಿ.ಎಂ.ಎಸ್ ವಕೀಲರಿಂದ ವಾದಿ ಪರಃ

ಈ ದಿನ ನಾನು ಹಾಜರುಪಡಿಸಿದ ದಾಖಲೆಗಳನ್ನು ಮೊದಲೇ ನನ್ನ ಸಾಕ್ಷಿ ವಿಚಾರಣೆಯ ಸಮಯದಲ್ಲಿ ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಆಗ ಸಿಕ್ಕಿರಲಿಲ್ಲ ಎಂದು ಹೇಳುತ್ತಾರೆ. ನಿ.ಡಿ-84 ಮತ್ತು 85 ಮಾತ್ರ ಹಳೆ ಪಹಣಿಗಳು ಎಂದರೆ ಸರಿ. ಉಳಿದ ದಾಖಲೆಗಳನ್ನು ನಾನು ಇತ್ತೀಚೆಗೆ ಪಡೆದುಕೊಂಡಿದ್ದೇನೆ ಎಂದರೆ ಸರಿ. ನಿ.ಡಿ-84 ಮತ್ತು 85 ನ್ನು ಮೊದಲೇ ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನಂತರದಲ್ಲಿ ಈ ದಾಖಲೆಗಳು ಸಿಕ್ಕವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ19-07-1999 ರಂದು ಪಾಲುವಿಭಾಗ ನನ್ನ ಮಕ್ಕಳ ಜೊತೆಗೆ ಮಾಡಿಕೊಂಡಿದ್ದರೂ, ಯಾಕೆ ಕೂಡಲೇ ಖಾತೆ ಮಾಡಿಸಿಕೊಳ್ಳಲಿಲ್ಲ ಎಂದರೆ ಸಾಕ್ಷಿ ಕಂದಾಯ ಇಲಾಖೆಯಲ್ಲಿ ವಿಳಂಭವ ಆಗಿರುತ್ತದೆ ಎಂದು ಹೇಳುತ್ತಾರೆ. ನಾನು ಈಗಲೂ ಪಾಲುವಿಭಾಗ ಆದ ನಂತರ ಆದ ಮುಟೇಷನ್ ಎಂಟ್ರಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಾನು 1999 ರಿಂದ 2003 ರವರೆಗಿನ ಪಹಣಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. 2003 ರವರೆಗೆ ಯಾವುದೇ ಖಾತೆ ಬದಲಾವಣೆ ಆಗದೇ ಇರುವ ಕಾರಣ, ಪಾಲುವಿಭಾಗ ಆಗಿಲ್ಲ ಎಂದು ಗೊತ್ತಾಗುತ್ತದೆ ಎಂದು ತಿಳಿದು, ನಾನು ಉದ್ದೇಶಪೂರ್ವಕವಾಗಿ ಸದರಿ ಪಹಣಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ನಿ.ಡಿ-91 ನ್ನು ತೋರಿಸಿ ಅದರಲ್ಲಿ ದಿನಾಂಕಃ17-11-2002

ರಿಂದ ಮಾನ್ಯತೆ ಪಡೆದಿದೆ ಎಂದು ಇದೆ ಎಂದರೆ ಸರಿ. ದಿನಾಂಕಃ20-10-2014 ರಂದು ವಾದಿ ಈ ದಾವೆ ದಾಖಲು ಮಾಡಿದ್ದು, ವಾದಿಯ ದಾವೆ ಕಾಲಪರಿಮಿತಿಯಲ್ಲಿ ಬರುವ ಕಾರಣ, ಅದು ಗೊತ್ತಾಗಿ ಉದ್ದೇಶ ಪೂರ್ವಕವಾಗಿ ಈ ಪಹಣಿ ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು 16 ಗುಂಟೆ ಮಾರಾಟ ಮಾಡಿದ ಬಗ್ಗೆ ಪಹಣಿಯಲ್ಲಿ ನಮೂದು ಇದ್ದು, ನಾನು ಅದಕ್ಕೆ ಸಂಬಂಧಿಸಿದ ಕ್ರಯಪತ್ರ ಅಥವಾ ಮುಟೇಷನ್ ಎಂಟ್ರಿ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಕ್ರಯಪತ್ರ ಹಾಜರುಪಡಿಸಬೇಕು ಎಂದು ಗೊತ್ತಾಗಲಿಲ್ಲ ಎಂದು ಹೇಳುತ್ತಾರೆ. 1999 ರಲ್ಲಿ ಲಕ್ಷ್ಮೀನಾರಾಯಣ ಮತ್ತು ವಿ.ಪಿ ನರಸಿಂಹರಾಜು ಇವರಿಗೆ 16 ಗುಂಟೆ ಜಮೀನನ್ನು ನಿ.ಡಿ-85 ರಲ್ಲಿ ನಮೂದು ಇರುವ ಹಾಗೇ ಮಾರಾಟ ಮಾಡಿದ್ದೇನೆ, ಆದರೆ ಯಾವ ದಿನಾಂಕದಂದು ಮಾರಿದ್ದೇನೆ ಎಂದು ದಿನಾಂಕ ನೆನಪಿಲ್ಲ. ನಾನು ಲಕ್ಷ್ಮೀನಾರಾಯಣ ಎನ್ನುವವರಿಗೆ ಮಾರಾಟ ಮಾಡಿದ್ದು, ಅವರು ಮಂಜುಳ ಇವರಿಗೆ ಮಾರಾಟ ಮಾಡಿದ್ದಾರೆ. ನಿ.ಡಿ-85 ರ ಪ್ರಕಾರ ಲಕ್ಷ್ಮೀನಾರಾಯಣ ಮತ್ತು ವಿ.ಪಿ ನರಸಿಂಹರಾಜು ಇವರಿಗೆ ಮಾರಾಟ ಮಾಡಿದ್ದೇನೆ ಎಂದು ಇದೆ ಎಂದರೆ ಸಾಕ್ಷಿ ಲಕ್ಷ್ಮೀನಾರಾಯಣ ನನ್ನ ಜೊತೆಗೆ ವ್ಯವಹಾರ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಾನು ಲಕ್ಷ್ಮೀನಾರಾಯಣ ಇವನಿಗೆ ಮಾರಾಟ ಮಾಡಿದ್ದೇನೆ ಎಂದು ನನ್ನ ಪ್ರತಿವಾದಪತ್ರದ ಪ್ಯಾರ 22 ಬಿ ಯಲ್ಲಿ ಸುಳ್ಳು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ಪ್ಯಾರ 22 ರಲ್ಲಿ ಮಂಜುಳಾ ಇವರಿಗೆ ಮಾರಾಟ ಮಾಡಿದ್ದೇನೆ ಎಂದು ಇದೆ ಎಂದರೆ ಸಾಕ್ಷಿ, ತಪ್ಪಾಗಿ ಆ ರೀತಿ ಆಗಿರಬಹುದು ಎಂದು ಹೇಳುತ್ತಾರೆ. ನಾನು ವಾದಿಗೆ ಮತ್ತು ನ್ಯಾಯಾಲಯಕ್ಕೆ ತಪ್ಪು ಗ್ರಹಿಕೆ ಮಾಡಲು ಒಂದೊಂದು ಕಡೆ ಒಂದೊಂದು ರೀತಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾವು ವಾದಿಗೆ ಗೊತ್ತಾಗದೇ ಪಾಲುವಿಭಾಗ ಪತ್ರ ಮಾಡಿಕೊಂಡಿದ್ದು, ಈಗ ಗೊಂದಲ ಸೃಷ್ಠಿ ಮಾಡಲು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕೋಡಿಹಳ್ಳಿ ಗ್ರಾಮದಲ್ಲಿ ಈ ದಾವಾ ಬಿ ಶೆಡ್ಯೂಲ್ ಜಮೀನು ಹೊರತುಪಡಿಸಿ, ನನಗೆ ಬೇರೆ ಯಾವುದೇ ಜಮೀನು ಮತ್ತು ಮನೆ ಇಲ್ಲ. ವಾದಿಯರು ಯಾವತ್ತೂ ಕೋಡಿಹಳ್ಳಿಯಲ್ಲಿ ವಾಸ ಇರಲಿಲ್ಲ ಎಂದರೆ ಸರಿ. 1999 ರಿಂದ ಮೂಲ ವಾದಿ ಮದುವೆಯಾದ ನಂತರ ಪ್ರತ್ಯೇಖ ವಾಸ ಇದ್ದಾರೆ ಎಂದರೆ ಸರಿ. ಆ ಕಾರಣದಿಂದ ವಾದಿಗೆ ಕೋಡಿಹಳ್ಳಿ ಜಮೀನನ್ನು ನಾನು ಸಾಗುವಳಿ ಮಾಡುತ್ತಿದ್ದೇನೋ ಅಥವಾ ಮಾರಾಟಮಾಡಿದ್ದೇನೋ ಎಂದು ಗೊತ್ತಾಗುವ ಸಾಧತೆ ಇಲ್ಲ ಎಂದರೆ ಸಾಕ್ಷಿ, ನಾನು ಹೇಗೆ ಹೇಳಲಿ ಎಂದು ಹೇಳುತ್ತಾರೆ. 1992 ರಲ್ಲಿ ನನ್ನ ಹೆಸರಿನಲ್ಲಿ ಕೋಡಿಹಳ್ಳಿ ಜಮೀನನ್ನು ಖರೀದಿ ಮಾಡಿದ್ದು ಎಂದರೆ ಸರಿ. 1992 ರಲ್ಲಿ ನನ್ನ ಮಾವ ನನಗೆ ಜಮೀನು ಖರೀದಿ ಮಾಡಲು ಸಹಾಯ ಮಾಡಿದ ಬಗ್ಗೆ ತೋರಿಸಲು, ನನಗೆ ಆತನ ಆದಾಯದ ಮೂಲದ ಕುರಿತು ದಾಖಲೆ ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಬೇಕು ಎಂದು ನನಗೆ ಗೊತ್ತಾಗಲಿಲ್ಲ ಎಂದು ಹೇಳುತ್ತಾರೆ. ನಿ.ಡಿ-86 ರಿಂದ 89 ರಲ್ಲಿ ನಮೂದಿಸಿದ ಜಮೀನುಗಳು 1992 ರಲ್ಲಿ ಮಹದೇವಪ್ಪ ಇವನ ಹೆಸರಿನಲ್ಲಿ ಇದ್ದ ಬಗ್ಗೆ ತೋರಿಸಲು ಆ ವರ್ಷದ ಪಹಣಿ ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ನಿ.ಡಿ-86 ರಿಂದ 89 ರಲ್ಲಿ ನಮೂದು ಇರುವ ವ್ಯಕ್ತಿಗಳು ಮಹದೇವಪ್ಪನ ಇವನ ವಾರಸುದಾರರು ಎಂದು ತೋರಿಸಲು ಮತ್ತು ಮಹದೇವಪ್ಪ ನನ್ನ ಮಾವ ಎಂದು ತೋರಿಸಲು ವಂಶವೃಕ್ಷ ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಮತ್ತು ಇತರೆ ಪ್ರತಿವಾದಿಯರಿಗೆ ಹಿಸ್ಸೆ ಕೊಡಬಾರದು ಎಂಬ ಉದ್ದೇಶದಿಂದ ಈ ಪ್ರಕರಣವನ್ನು ಹಾಗೇ ಮುಂದೆ ತಳ್ಳುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**